ಬಸವರಾಜ ಹೊರಟ್ಟಿ
ಶಾಸಕರು, ಕರ್ನಾಟಕ ವಿಧಾನ ಪರಿಷತ್ತು
ಮಾಜಿ ಸಭಾಪತಿಗಳು ಹಾಗೂ
ಮಾಜಿ ಶಿಕ್ಷಣ ಸಚಿವರು

BASAVARAJ HORATTI
Member, Karnataka Legislative Council
Former Chairman, Karnataka Legislative Council
& Former Education Minister

ಶಾಸಕರು ಕರ್ನಾಟಕ ವಿಧಾನ ಪರಿಷತ್ತು

ಅಡವೇಶ್ವರ ಸದನ, ವೇಮನ ಬೀದಿ
ಹುಬ್ಬಳ್ಳಿ – 580 020 ಜಿಲ್ಲೆ : ಧಾರವಾಡ
ಮೊ : 9448111188
ದೂರವಾಣಿ : 0836-2351383
Adaveshwar Sadan, Veman Beedi
HUBBALLI - 580 020
Dist.: Dharwad
M.: 9448111188 Ph. : 0836 - 2351383
E-mail : bshoratti@gmail.com

ಸಂಖ್ಯೆ:ಪಶಿಕ್ಷೇ:ವಿಪಸ: 771 :2026 ದಿನಾಂಕ: 31-08-2026

ಶ್ರೀ ತಾವರಚಂದ್ ಗೆಹ್ಲೋಟ್ ಜಿ,
ಗೌರವಾನ್ವಿತ ರಾಜ್ಯಪಾಲರು, ಕರ್ನಾಟಕ ಲೋಕಭವನ,
ಬೆಂಗಳೂರು.

ಗೌರವಾನ್ವಿತ ಸರ್,

ಈಗ ಸಮೀಪದಲ್ಲಿ ವಿಧಾನ ಪರಿಷತ್ತಿಗೆ ಐದು ಜನರನ್ನು ನಾಮನಿರ್ದೇಶನ ಮಾಡುತ್ತಾರೆ. ಭಾರತ ಸಂವಿಧಾನದ ಆರ್ಟೀಕಲ್ Articale 171 ನೇ ಭಾರತ ಸಂವಿಧಾನದಲ್ಲಿ Composition Of Legislative Council ಎಂಬ ನಿಯಮವಿದೆ. ಹಾಗೂ ಭಾರತ ಸಂವಿಧಾನದ (4)(3) ನೇಯ ಖಂಡದ (ಎ)(ಬಿ)(ಸಿ) ಉಪಖಂಡಗಳ ಮೇರೆಗೆ ಚುನಾಯಿತರಾಗಬೇಕಾದ ಸದಸ್ಯರು ಸಂಸತ್ತು ಮಾಡಿದ ಯಾವುದೇ ಕಾನೂನು ಮೂಲಕ ಅಥವಾ ಅದರ ಮೇರೆಗೆ ನಿಯಮಿಸಬಹುದಾದಂತಹ ಪ್ರಾದೇಶಿಕ ಚುನಾವಣಾ ಕ್ಷೇತ್ರದಿಂದ ಆಯ್ಕೆಯಾಗತಕ್ಕದ್ದು ಮತ್ತು ಸದರಿ ಉಪಖಂಡಗಳ ಮೇರೆಗೆ ಚುನಾವಣೆಗಳು ಪ್ರಮಾಣಾನುಸಾರ ಪ್ರಾತಿನಿಧ್ಯ ಪ್ರತಿನಿಧಿ ಅನುಸಾರ ಏಕ ವರ್ಗಾವಣೆಯ ಮತದ ಮೂಲಕ ನಡೆತಕ್ಕದ್ದು (5) ರಾಜ್ಯಪಾಲರಿಂದ (3) ನೇಯ ಖಂಡದ ಈ ಉಪಖಂಡದ ಮೇರೆಗೆ ನಾಮನಿರ್ದೇಶನರಾಗಬೇಕಾದ ಸದಸ್ಯರು ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ, ಅಂದರೆ ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರ ಚಳುವಳಿ ಮತ್ತು ಸಮಾಜ ಸೇವೆಗಳಲ್ಲಿ ವಿಶೇಷ ಜ್ಞಾನವನ್ನು ಅಥವಾ ವ್ಯವಹಾರಿಕ ಅನುಭವವನ್ನು ಪಡೆದವರಾಗಿರತಕ್ಕದ್ದು. ಸಂವಿದಾನದ 172ನೇ ರಾಜ್ಯ ವಿಧಾನ ಮಂಡಲಗಳ ಅವಧಿ ಬೇರೆ ಬೇರೆ ಇರುತ್ತದೆ. ವಿಧಾನಸಭೆ ವಿಸರ್ಜನೆಯಾದ ಹೊರತು ಅದು ತನ್ನ ಮೊದಲ ಸಭೆಗೆ ಗೊತ್ತುಪಡಿಸಿದ ದಿನಾಂದಿಂದ 5 ವರ್ಷಗಳ ಅವಧಿಗೆ ಮುಂದುವರೆಯತಕ್ಕದ್ದು ಆದರೆ ರಾಜ್ಯದ ಒಂದು ವಿಧಾನ ಪರಿಷತ್ತನ್ನು ವಿಸರ್ಜನೆಗೊಳಿಪಡಿಸತಕ್ಕದಲ್ಲ ಅದರ ಸದಸ್ಯರಲ್ಲಿ ಮೂರನೇಯ ಒಂದು ಭಾಗದಷ್ಟು ಸದಸ್ಯರು ಸಂಸತ್ತಿನ ಕಾನೂನಿನ ಮೂಲಕ ಆ ಬಗ್ಗೆ ಮಾಡಿದ ಉಪಬಂಧ ಅನುಸಾರವಾಗಿ ಪ್ರತಿ ಎರಡನೇ ವರ್ಷ ಮುಕ್ತಾಯವಾದ ಮೇಲೆ ನಿವೃತ್ತರಾಗುತ್ತಾರೆ. ಈ ಎಲ್ಲ ವಿಚಾರವನ್ನು ತಮಗೆ ಅರಿವುಪಡಿಸುವುದು, ಮುಖ್ಯವಾಗಿದೆ. ತಮಗೆ ವಿನಂತಿಸುವುದೇನೆಂದರೆ ಮೇಲೆ ಹೇಳಿದಂತೆ ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರ ಮತ್ತು ಸಮಾಜ ಸೇವೆ ಇವುಗಳಲ್ಲಿ ಒಬ್ಬೊಬ್ಬರನ್ನು ಕಡ್ಡಾಯವಾಗಿ ನಾಮನಿರ್ದೇಶನ ಮಾಡಬೇಕು ಸರಕಾರಗಳು ಈ ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ತಮ್ಮ ಹಿಂದೆ ತಿರುಗಾಡುತ್ತಿರುವ ರಾಜಕಾರಣಿಗಳನ್ನು ಈ ಸ್ಥಾನಕ್ಕೆ ನಾಮಕರಣ ಮಾಡುವುದು ಸಂವಿಧಾನ ವಿರೋಧಿ ಕೆಲಸವಾಗುತ್ತದೆ. ಆದ್ದರಿಂದ ನಾನು ತಮಗೆ ವಿನಂತಿ ಮಾಡುವುದೇನೆಂದರೆ ಮೇಲೆ ಹೇಳಿದಂತಹ ವ್ಯಕ್ತಿಗಳನ್ನು ಬಿಟ್ಟು ರಾಜಕಾರಣಿಗಳ ಹಿಂಬಾಲಿಕರು ಮತ್ತು ಯಾವುದೇ ರೀತಿಯ ಅನುಭವ ಇಲ್ಲದವರನ್ನು ವಿಧಾನಪರಿಷತ್ತಿಗೆ ನಾಮನಿರ್ದೇಶನ ಮಾಡಿ ಅದರ ಘನತೆ, ಗೌರವವನ್ನು ಕಡಿಮೆ ಮಾಡಿ ಚಿಂತಕರ ಚಾವಡಿ ಅನ್ನುವದಕ್ಕೆ ಕಳಂಕ ಬರುವಂತೆ ನಡೆಯುತ್ತಿರುವುದು ಅತ್ಯಂತ ನೋವಿನ ಸಂಗತಿ.

ಈ ಹಿಂದೆ ಅಂದರೆ 1952 ರಿಂದ ಇದುವರೆಗೆ ಘನವೆತ್ತ ರಾಜ್ಯಪಾಲರಿಂದ ನಾಮನಿರ್ದೇಶನಗೊಂಡ ಸದಸ್ಯರು ಸುಮಾರು 123 ಅದರಲ್ಲಿ ಶ್ರೀ ಟಿ. ಚೌಡಯ್ಯ (ದಿ: 14-05-1952 ರಿಂದ 13-05-1958, ಕಲೆ) ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ (ದಿ: 14-05-1952 ರಿಂದ 13-05-1958, ಸಾಹಿತ್ಯ), ಶ್ರೀ ಎನ್.ಎ.ಅಯ್ಯಂಗಾರ್ (ದಿ: 14-05-1954 ರಿಂದ 13-05-1960, ಸಮಾಜ ಸೇವೆ), ಡಾ: ಎನ್.ಸಿ.ನಂದೀಮಠ (ದಿ: 18-01-1958 ರಿಂದ 13-05-1962, ಸಮಾಜ ಸೇವೆ, ವೈದ್ಯಕೀಯ ಕ್ಷೇತ್ರ) ಡಾ: ಎಸ್.ಚಂಪಾ (ದಿ: 14-05-1958 ರಿಂದ 13-05-1964, ಸಾಹಿತ್ಯ), ಶ್ರೀ ಎಂ.ಪಿ.ಎಲ್.ಶಾಸ್ತ್ರಿ (ದಿ: 14-05-1962 ರಿಂದ 13-05-1968, ಕಲೆ, ಶಿಕ್ಷಣ ಕ್ಷೇತ್ರ), ಶ್ರೀ ಎಂ. ಗೋವರ್ಧನ ರಾವ್ (ದಿ: 14-05-1962

ಬಸವರಾಜ ಹೊರಟ್ಟಿ
ಶಾಸಕರು, ಕರ್ನಾಟಕ ವಿಧಾನ ಪರಿಷತ್ತು
ಮಾಜಿ ಸಭಾಪತಿಗಳು ಹಾಗೂ
ಮಾಜಿ ಶಿಕ್ಷಣ ಸಚಿವರು
BASAVARAJ HORATTI
Member, Karnataka Legislative Council
Former Chairman, Karnataka Legislative Council
& Former Education Minister

ಶಾಸಕರು
ಕರ್ನಾಟಕ ವಿಧಾನ ಪರಿಷತ್ತು

ಅಡವೀಶ್ವರ ಸದನ, ವೇಮನ ಬೀದಿ
ಹುಬ್ಬಳ್ಳಿ – 580 020 ಜಿಲ್ಲೆ : ಧಾರವಾಡ
ಮೊ : 9448111188
ದೂರವಾಣಿ : 0836-2351383
Adaveshwar Sadan, Veman Beedi
HUBBALLI - 580 020
Dist.: Dharwad
M.: 9448111188 Ph. : 0836 - 2351383
E-mail : bshoratti@gmail.com

ರಿಂದ 13-05-1968, ಸಾಹಿತ್ಯ), ಶ್ರೀ ತೇಜೋಸಿಂಗ್ ರಾಥೋಡ್ (ದಿ: 19-05-1964 ರಿಂದ 18-05-1970, ಕಲೆ (ಕ್ರೀಡಾ ಕ್ಷೇತ್ರ) ಶ್ರೀ ಬಸವರಾಜ ಕಟ್ಟಿಮನಿ (ದಿ: 14=05-1968 ರಿಂದ 13-05-1974, ಕಲೆ), ಶ್ರೀ ಅಬ್ದುಲ್ ಗಫಾರ್ ಹುಸೇನ್ ಸಾಬ್ (ದಿ: 12-06-1970 ರಿಂದ 11-06-1976, ಸಮಾಜ ಸೇವೆ), ಶ್ರೀಮತಿ ಅಕ್ಸೋವಿಯೂ ಆಲಬುಕ್ವರ್ಕ್ಯೂ (ದಿ: 22-12-1970 ರಿಂದ 30-06-1972, ಸಮಾಜ ಸೇವೆ), ಶ್ರೀಮತಿ ಜೆ. ಮಂದನ (ದಿ: 12-06-1976 ರಿಂದ 11-06-1982, ಸಮಾಜ ಸೇವೆ, (ಶಿಕ್ಷಣ ಕ್ಷೇತ್ರ), ಹೆಚ್. ನರಸಿಂಹಯ್ಯ (ದಿ: 14-05-1980 ರಿಂದ 13-05-1986, ಸಮಾಜ ಸೇವೆ, (ಶಿಕ್ಷಣ ಕ್ಷೇತ್ರ), ಬಿ.ಜಯಮ್ಮ (ದಿ: 14-05-1980 ರಿಂದ 13-05-1986, ಕಲೆ (ನಾಟಕ ರಂಗ ಮತ್ತು ಚಲನಚಿತ್ರ ಕ್ಷೇತ್ರ) ಶ್ರೀ ಖಾದ್ರಿ ಶ್ಯಾಮಣ್ಣ (ದಿ: 09-08-1984 ರಿಂದ 08-08-1990 ಕಲೆ (ಪತ್ರಕರ್ತರು), ಡಾ: ಮಲ್ಲಿಕಾರ್ಜುನ ಮನ್ಸೂರ್ (ದಿ: 09-08-1984 ರಿಂದ 08-08-1990 ಕಲೆ (ಸಂಗೀತ ಕ್ಷೇತ್ರ) ಶ್ರೀಮತಿ ಆರತಿ (ದಿ: 09-08-1984 ರಿಂದ 08-08-1990 ಕಲೆ (ಸಿನಿಮಾ ರಂಗ) ಶ್ರೀ ಅನಂತನಾಗ್ (ದಿ: 05-10-1988 ರಿಂದ 04-10-1994 ಕಲೆ (ಸಿನಿಮಾ ರಂಗ), ಡಾ: ಸಿದ್ದಲಿಂಗಯ್ಯ (ದಿ: 05-10-1988 ರಿಂದ 04-10-1994 ಕಲೆ (ಸಾಹಿತ್ಯ), ಪದ್ಮಶ್ರೀ ಡಾ: ಎಂ.ಸಿ.ಮೋದಿ (ದಿ: 09-08-1990 ರಿಂದ 08-08-1996 ಕಲೆ (ವೈದ್ಯಕೀಯ ಕ್ಷೇತ್ರ) ಕಲೆ (ಬರಹಗಾರರು ಮತ್ತು ಶಿಕ್ಷಣ ಕ್ಷೇತ್ರ), ಶ್ರೀಮತಿ ಸರಿತಾ ಕುಸುಮಾಕರ್ ದೇಸಾಯಿ (ದಿ: 12-05-1995 ರಿಂದ 11-05-2001 ಸಾಹಿತ್ಯ (ಬರಹಗಾರ್ತಿ), ಡಾ: ಏಜಾಸುದ್ದೀನ್ (ದಿ: 12-05-1995 ರಿಂದ 11-05-2001 ಕಲೆ (ಶಿಕ್ಷಣ ಕ್ಷೇತ್ರ), ಶ್ರೀ ಪಿ.ರಾಮಯ್ಯ (ದಿ: 28-07-1998 ರಿಂದ 27-07-2004 ಕಲೆ (ಪತ್ರಕರ್ತರು), ಶ್ರೀಮತಿ ಉಮಾಶ್ರೀ (ದಿ: 21-06-2001 ರಿಂದ 20-06-2007, ಕಲೆ (ರಂಗಭೂಮಿ & ಚಲನಚಿತ್ರ ರಂಗ), ವೈ.ಎಸ್.ವಿ.ದತ್ತ (ದಿ: 21-05-2006 ರಿಂದ 20-05-2012, ಕಲೆ (ಶಿಕ್ಷಣ ಕ್ಷೇತ್ರ), ಶ್ರೀನಾಥ್ (21-05-2006 ರಿಂದ 20-05-2012 ರಿಂದ ಕಲೆ (ಚಲನಚಿತ್ರ ರಂಗ), ಪ್ರೊ: ಡಾ: ಮುಮ್ತಾಜ್ ಅಲಿ ಖಾನ್ (ದೀ; 21-06-2008, ಕಲೆ (ಶಿಕ್ಷಣ ಕ್ಷೇತ್ರ), ಡಾ: ಎಸ್.ಆರ್.ಲೀಲಾ (ದಿ: 21-06-2008 ರಿಂದ 20-06-2014, ಸಾಹಿತ್ಯ), ಡಾ: ದೊಡ್ಡರಂಗೇಗೌಡ (ದಿ: 21-06-2008 ರಿಂದ 20-06-2014 ಸಾಹಿತ್ಯ), ಶ್ರೀ ಜಗ್ಗೇಶ್ (ದಿ: 04-02-2010 ರಿಂದ 03-02-2016 ಕಲೆ (ಚಲನಚಿಕತ್ರ ರಂಗ), ಡಾ: ತಳವಾರ್ ಸಾಬಣ್ಣ (ದಿ: 22-07-2020 ರಿಂದ 21-07-2026, ಕಲೆ (ಶಿಕ್ಷಣ ಕ್ಷೇತ್ರ), ಡಾ: ಜಯಮಾಲಾ ರಾಮಚಂದ್ರ (ದಿ: 24-06-2014 ರಿಂದ 23-06-2020 ಕಲೆ (ಚಲನಚಿತ್ರ ರಂಗ)

ಮೇಲೆ ತಿಳಿಸಿದ ಎಲ್ಲ ಮಹನೀಯರು ಒಂದಿಲ್ಲೊಂದರಲ್ಲಿ ಪರಿಣಿತರಾದವರು ನಾಮನಿರ್ದೇಶನ ಹೊಂದಿದ್ದರು. ಈ ಹಿನ್ನಲೆಯಲ್ಲಿ ನಾನು ತಮಗೆ ವಿನಂತಿಸುವುದೆನೆಂದರೆ, ಇಂಥ ಮಹನೀಯರನ್ನು ಬಿಟ್ಟು ರಾಜಕಾರಣಿಗಳನ್ನು ಮತ್ತು ತಮ್ಮ ಹಿಂಬಾಲಕರನ್ನು ಸರಕಾರ ನಾಮ ನಿರ್ದೇಶನ ಮಾಡಿದರೆ ತಾವು ರಾಜ್ಯದ ಮುಖ್ಯಸ್ಥರಾಗಿದ್ದು ತಮ್ಮ ಅಧಿಕಾರವನ್ನು ಚಲಾಯಿಸಿ ಅಂತಹ ಅಭ್ಯರ್ಥಿಗಳನ್ನು ಸರಕಾರ ಶಿಫಾರಸ್ಸು ಮಾಡಿದರೆ ಯಾವುದೇ ಮುಲಾಜೀಲ್ಲದೇ ಅದನ್ನು ತಿರಸ್ಕರಿಸಿ ವಿಧಾನ ಪರಿಷತ್ತಿನ ಘನತೆ, ಗೌರವವನ್ನು ಹೆಚ್ಚಿಸುತ್ತಿರೆಂದು ನನ್ನ ನಂಬಿಕೆ ಹಾಗೂ ತಮ್ಮ ಅಧಕಾರ ವ್ಯಾಪ್ತಿಯಲ್ಲಿ ಈ ಕಾರ್ಯವನ್ನು ಮಾಡಿದರೆ ಇತಿಹಾಸದಲ್ಲಿ ತಮ್ಮ ಹೆಸರು ಚಿರವಾಗಿ ಉಳಿಯುತ್ತದೆ ಮತ್ತು ಅದನ್ನು ಕಾರ್ಯಗತಗೊಳಿಸುವುದು ನಿಮ್ಮ ಜವಾಬ್ದಾರಿಯು ಸಹ ಎಂದು ವಿನಂತಿಸುತ್ತೇನೆ.

ತಮ್ಮ ವಿಶ್ವಾಸಿ

(ಬಸವರಾಜ ಹೊರಟ್ಟಿ)